Re. No.D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**

( ವಿಶೇಷ ಸಂಚಿಕೆ )


भाग IX अनुभाग 1

PART IX SECTION 1

ಭಾಗ IX ವಿಭಾಗ 1

**प्राधिकार से प्रकाशित**

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं–1 | नई दिल्ली, सोमवार, मे 5 -1997 | वैशाख 15, 1919 (शक) | खन्ड–16 |
| No. 1 | New Delhi, Monday, May 5, 1997 | Vaishakha 15, 1919 (Saka) | Vol. 16 |
| ಸಂಖ್ಯೆ ೧ | ನವದೆಹಲಿ, ಸೋಮವಾರ, ಮೇ ೫, ೧೯೯೭ | ವೈಶಾಖ ೧೫, ೧೯೧೯ (ಶಕ) | ಸಂಪುಟ ೧೬ |


## Ministry of Law, Justice & Company Affairs

(Legislative Department)

New Delhi, December 25, 1995

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

(ವಿಧಾಯೀ ಇಲಾಖೆ)

ನವದೆಹಲಿ, 25ನೇ ಡಿಸೆಂಬರ್ 1995

The Translation in Kannada of the following Acts, namely—(1) The Employers Liability Act, 1938 (2) The Drugs (Control) Act, 1950 (3) The Weekly Holiday Act, 1942 (4) The All India Council for Technical Education Act, 1987 (5) The Hindu Succession Act, 1956 (6) The Additional Duties of Excise (Textiles and Textile Articles) Act, 1978 (7) The Bureau of Indian Standerds Act, 1986 (8) The Provident Funds Act, 1925 and (9) The Indian Divorce Act, 1869 are hereby published under the authority of the President and shall be deemed to be authoritative texts thereof in Kannada under clause (a) of Section (2) of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ—(1) ನಿಯೋಜಕ ಹೊಣೆಗಾರಿಕೆ ಅಧಿನಿಯಮ, 1938 (2) ಔಷಧ (ನಿಯಂತ್ರಣ) ಅಧಿನಿಯಮ, 1950 (3) ವಾರದ ರಜಾ ದಿನ ಅಧಿನಿಯಮ, 1942 (4) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ, 1987 (5) ಹಿಂದೂ ಉತ್ತರಾಧಿಕಾರ ಅಧಿನಿಯಮ, 1956 (6) ಅಧಿಕ ಉತ್ಪಾದನಾ ಶುಲ್ಕ (ಜವಳಿ ಮತ್ತು ಜವಳಿ ವಸ್ತು) ಅಧಿನಿಯಮ, 1978 (7) ಭಾರತೀಯ ಮಾನಕ ಸಂಸ್ಥೆ ಅಧಿನಿಯಮ, 1986 (8) ಭವಿಷ್ಯ ನಿಧಿ ಅಧಿನಿಯಮ, 1925 ಮತ್ತು (9) ಭಾರತ ವಿವಾಹ ವಿಚ್ಛೇದನ ಅಧಿನಿಯಮ, 1869— ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ (1973ರ 50) 2ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಔಷಧಗಳ (ನಿಯಂತ್ರಣ) ಅಧಿನಿಯಮ, 1950
## (1950ರ 26ನೆ ಅಧಿನಿಯಮ)

(ಏಪ್ರಿಲ್ 7, 1950)

ಔಷಧಗಳ ಮಾರಾಟ, ಸರಬರಾಜು ಮತ್ತು ವಿತರಣೆಯ ನಿಯಂತ್ರಣದ ಬಗ್ಗೆ ಉಪಬಂಧಿಸುವ ಅಧಿನಿಯಮ.

ಇದು ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:–

**1. ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ.** – (1) ಈ ಅಧಿನಿಯಮವನ್ನು ಔಷಧಗಳ (ನಿಯಂತ್ರಣ) ಅಧಿನಿಯಮ, 1950 ಎಂದು ಕರೆಯತಕ್ಕದ್ದು.

(2) 1ನೆ ನವೆಂಬರ್ 1956ರ ನಿಕಟ ಪೂರ್ವದಲ್ಲಿ 'ಸಿ' ಭಾಗದ ರಾಜ್ಯಗಳಲ್ಲಿ ಅಡಕವಾಗಿದ್ದ ರಾಜ್ಯಕ್ಷೇತ್ರಗಳಿಗೆ ಇದು ಅನ್ವಯಿಸತಕ್ಕದ್ದು.

**2. ಪರಿಭಾಷೆಗಳು.**– (1) ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,–

(ಎ) **"ವ್ಯಾಪಾರಿ"** ಎಂದರೆ, ಯಾವುದೇ ಔಷಧ ಮಾರಾಟದ ವ್ಯವಹಾರವನ್ನು ಸಗಟಾಗಿ ಅಥವಾ ಚಿಲ್ಲರೆಯಾಗಿ, ಖುದ್ದಾಗಿ ಅಥವಾ ಇತರ ಯಾರೇ ವ್ಯಕ್ತಿಯ ಮೂಲಕ ನಡೆಸುವ ಒಬ್ಬ ವ್ಯಕ್ತಿ;

(ಬಿ) **"ಔಷಧ"** ಎಂದರೆ, ಔಷಧಗಳ ಮತ್ತು ಪ್ರಸಾಧನ ಸಾಮಗ್ರಿಗಳ ಅಧಿನಿಯಮ, 1940 (1940 ರ XXIII) ರ 3ನೇ ಪ್ರಕರಣದ (ಬಿ) ಖಂಡದಲ್ಲಿ ಪರಿಭಾಷಿಸಿದಂತೆ, ಯಾವ ಔಷಧದ ಸಂಬಂಧದಲ್ಲಿ 3ನೇ ಪ್ರಕರಣದ ಮೇರೆಗೆ ಘೋಷಣೆಯನ್ನು ಮಾಡಲಾಗಿದೆಯೋ ಆ ಯಾವುದೇ ಔಷಧ:

(ಸಿ) **"ಮಾರಾಟಕ್ಕೆ ನೀಡಿಕೆ"** ಎಂಬುದು ಒಂದು ಬೆಲೆ ಪಟ್ಟಿಯನ್ನು ಪ್ರಕಟಿಸುವ ಮೂಲಕ, ಬೆಲೆ ಸೂಚಿಸುವ ಚಿಹ್ನೆಯೊಡನೆ ಔಷಧವನ್ನು ಮಾರಾಟಕ್ಕಾಗಿ ಪ್ರದರ್ಶಿಸುವ ಮೂಲಕ, ಹೇಳಿದ ದರವನ್ನು ನಿರೂಪಿಸುವ ಮೂಲಕ ಅಥವಾ ಬೇರೆ ರೀತಿಯಲ್ಲಿ ಹೇಗಾದರೂ, ಯಾವುದೇ ಔಷಧದ ಮಾರಾಟಕ್ಕಾಗಿ ಒಬ್ಬ ವ್ಯಕ್ತಿಯು ಪ್ರಸ್ತಾಪಿಸಿದ ಬೆಲೆಯನ್ನು ತಿಳಿಸುವ ಬಗೆಗಿನ ನಿರ್ದೇಶನವನ್ನು ಒಳಗೊಳ್ಳುತ್ತದೆ:

(ಡಿ) **"ಉತ್ಪಾದಕ"** ಎಂಬುದು ತಯಾರಕನನ್ನು ಒಳಗೊಳ್ಳುತ್ತದೆ.

(1ಎ) 1956ರ ನವೆಂಬರ್ 1ನೇ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ 'ಸಿ' ಭಾಗದ ರಾಜ್ಯಗಳಾದ ಅಜ್ಮೀರ್ ಅಥವಾ ಭೂಪಾಲ್ ಮತ್ತು ವಿಂಧ್ಯಪ್ರದೇಶ ಅಥವಾ ಕೊಡಗು ಅಥವಾ ಕಚ್ಛ್‌ನಲ್ಲಿ ಅಡಕವಾಗಿದ್ದ ರಾಜ್ಯಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದಲ್ಲಿ ಕೇಂದ್ರ ಸರ್ಕಾರದ ಅಥವಾ ಚೀಫ್ ಕಮೀಷನರರ ಬಗ್ಗೆ ಮಾಡಿದ ಯಾವುದೇ ನಿರ್ದೇಶನವನ್ನು, ಸಂದರ್ಭಾನುಸಾರ, ರಾಜಸ್ತಾನ ಅಥವಾ ಮಧ್ಯಪ್ರದೇಶ ಅಥವಾ ಮೈಸೂರು ಅಥವಾ ಮುಂಬಯಿಯ ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ನಿರ್ದೇಶನವೆಂದು ಅರ್ಥ ಮಾಡತಕ್ಕದ್ದು.

**(2) ಯಾವುದೇ ಔಷಧವು ಕೆಳಕಂಡ ಸಂದರ್ಭಗಳಲ್ಲಿ.–**

(i) ಆ ವ್ಯಕ್ತಿಯ ಪರವಾಗಿ ಇನ್ನೊಬ್ಬ ವ್ಯಕ್ತಿಯು ಅದನ್ನಿಟ್ಟುಕೊಂಡಿರುವಾಗ ಅಥವಾ ಆ ಇನ್ನೊಬ್ಬ ವ್ಯಕ್ತಿಯ ಪರವಾಗಿ ಅ ವ್ಯಕ್ತಿಯು ಅದನ್ನಿಟ್ಟುಕೊಂಡಿರುವಾಗ;

(ii) ಅದು ಇನ್ನೊಬ್ಬ ವ್ಯಕ್ತಿಗೆ ಅಡಮಾನವಾಗಿದ್ದರೂ;

– ಒಬ್ಬ ವ್ಯಕ್ತಿಯ ಸ್ವಾಧೀನದಲ್ಲಿದೆಯೆಂದು ಭಾವಿಸತಕ್ಕದ್ದು.

**3. ಈ ಅಧಿನಿಯಮವು ಅನ್ವಯಿಸುವ ಔಷಧಗಳು.** – ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಯಾವುದೇ ಔಷಧವನ್ನು ಈ ಅಧಿನಿಯಮವು ಅನ್ವಯಿಸುವ ಔಷಧವೆಂದು ಘೋಷಿಸಬಹುದು.

**4. ಗರಿಷ್ಠ ಬೆಲೆಗಳನ್ನು ಮತ್ತು ಇಟ್ಟುಕೊಳ್ಳಬಹುದಾದ ಅಥವಾ ಮಾರಬಹುದಾದ ಗರಿಷ್ಠ ಪ್ರಮಾಣಗಳನ್ನು ನಿಗದಿ ಮಾಡುವುದು.** – (1) ಚೀಫ್ ಕಮೀಷನರ್‌ನು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಯಾವುದೇ ಔಷಧದ ಸಂಬಂಧದಲ್ಲಿ,–

(ಎ) ಒಬ್ಬ ವ್ಯಾಪಾರಿಯು ಅಥವಾ ಉತ್ಪಾದಕನು ವಿಧಿಸಬಹುದಾದ ಗರಿಷ್ಠ ಬೆಲೆಯನ್ನು ಅಥವಾ ದರವನ್ನು;

(ಬಿ) ಒಬ್ಬ ವ್ಯಾಪಾರಿಯು ಅಥವಾ ಉತ್ಪಾದಕನು ತನ್ನ ಸ್ವಾಧೀನದಲ್ಲಿ ಯಾವುದೇ ಒಂದು ಕಾಲದಲ್ಲಿ ಇಟ್ಟುಕೊಳ್ಳಬಹುದಾದ ಗರಿಷ್ಠ ಪ್ರಮಾಣವನ್ನು;

(ಸಿ) ಯಾವುದೇ ಒಂದು ವ್ಯವಹಾರದಲ್ಲಿ ಯಾರೇ ವ್ಯಕ್ತಿಯು ಮಾರಾಟ ಮಾಡಬಹುದಾದ ಗರಿಷ್ಠ ಪ್ರಮಾಣವನ್ನು

– ನಿಗದಿ ಮಾಡಬಹುದು.

(2) ಈ ಪ್ರಕರಣದ ಮೇರೆಗೆ ಯಾವುದೇ ಔಷಧದ ಸಂಬಂಧದಲ್ಲಿ ನಿಗದಿ ಮಾಡಲಾದ ಬೆಲೆಗಳು ಅಥವಾ ದರಗಳು ಮತ್ತು ಪ್ರಮಾಣಗಳು ಬೇರೆ ಬೇರೆ ಸ್ಥಳಗಳಲ್ಲಿ ಅಥವಾ ವ್ಯಾಪಾರಿಗಳ ಅಥವಾ ಉತ್ಪಾದಕರ ಬೇರೆ ಬೇರೆ ವರ್ಗಗಳಿಗಾಗಿ ಬೇರೆ ಬೇರೆಯಾಗಿರಬಹುದು.

**5. 4ನೇ ಪ್ರಕರಣದ ಮೇರೆಗೆ ಗರಿಷ್ಠ ಬೆಲೆಯನ್ನು ನಿಗದಿ ಮಾಡಿರುವಲ್ಲಿ ಮಾರಾಟ, ಮುಂತಾದವುಗಳ ಮೇಲೆ ನಿರ್ಬಂಧಗಳು.**– ಯಾರೇ ವ್ಯಾಪಾರಿಯು ಅಥವಾ ಉತ್ಪಾದಕನು,–

(ಎ) 4ನೇ ಪ್ರಕರಣದ (1)ನೆ ಉಪಪ್ರಕರಣದ (ಎ) ಖಂಡದ ಮೇರೆಗೆ ಅಧಿಸೂಚನೆಯ ಮೂಲಕ ನಿಗದಿಪಡಿಸಿದ ಗರಿಷ್ಠ ಬೆಲೆಗಿಂತ ಹೆಚ್ಚಿನ ಬೆಲೆಗೆ ಅಥವಾ ದರದಲ್ಲಿ ಯಾವುದೇ ಔಷಧವನ್ನು ಯಾರೇ ವ್ಯಕ್ತಿಗೆ ಮಾರಾಟ ಮಾಡತಕ್ಕದ್ದಲ್ಲ, ಮಾರಾಟ ಮಾಡಲು ಒಪ್ಪತಕ್ಕದ್ದಲ್ಲ, ಮಾರಾಟಕ್ಕೆ ನೀಡತಕ್ಕದ್ದಲ್ಲ ಅಥವಾ ಅನ್ಯಥಾ ವಿಲೇ ಮಾಡತಕ್ಕದ್ದಲ್ಲ;

(ಬಿ) 4ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಅಧಿಸೂಚನೆಯ ಮೂಲಕ ನಿಗದಿಪಡಿಸಿದ ಗರಿಷ್ಠ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಯಾವುದೇ ಔಷಧಿಯು ಯಾವುದೇ ಒಂದು ಕಾಲದಲ್ಲಿ ಅವನ ಸ್ವಾಧೀನದಲ್ಲಿರತಕ್ಕದ್ದಲ್ಲ; ಅಥವಾ

(ಸಿ) 4ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಅಧಿಸೂಚನೆಯ ಮೂಲಕ ನಿಗದಿಪಡಿಸಿದ ಗರಿಷ್ಠ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಯಾವುದೇ ಔಷಧವನ್ನು ಯಾವುದೇ ಒಂದು ವ್ಯವಹಾರದಲ್ಲಿ ಯಾರೇ ವ್ಯಕ್ತಿಗೆ ಮಾರಾಟ ಮಾಡತಕ್ಕದ್ದಲ್ಲ, ಮಾರಾಟ ಮಾಡಲು ಒಪ್ಪತಕ್ಕದ್ದಲ್ಲ ಅಥವಾ ಮಾರಾಟಕ್ಕೆ ನೀಡತಕ್ಕದ್ದಲ್ಲ.

**6. ಯಾವುದೇ ಒಂದು ಕಾಲದಲ್ಲಿ ಸ್ವಾಧೀನದಲ್ಲಿರಬಹುದಾದ ಪ್ರಮಾಣದ ಬಗ್ಗೆ ಸಾಮಾನ್ಯ ಪರಿಮಿತಿ.–** (1) ಈ ಪ್ರಕರಣವು ಅನ್ವಯಿಸುವ ಯಾವುದೇ ಔಷಧವು, ತನ್ನ ಯುಕ್ತ ಅಗತ್ಯಗಳಿಗೆ ಅವಶ್ಯಕವಾಗುವಷ್ಟು ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಯಾರೇ ವ್ಯಕ್ತಿಯ ಸ್ವಾಧೀನದಲ್ಲಿ ಯಾವುದೇ ಒಂದು ಕಾಲದಲ್ಲಿ ಇರತಕ್ಕದ್ದಲ್ಲ.

(2) ಚೀಫ್ ಕಮೀಷನರ್‌ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟವಾದ ಆದೇಶದ ಮೂಲಕ, ಆ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಬಹುದಾದಂಥ ಔಷಧಗಳಿಗೆ ಮಾತ್ರ ಈ ಪ್ರಕರಣವು ಅನ್ವಯವಾಗತಕ್ಕುದು:

ಪರಂತು, ಯಾರೇ ವ್ಯಾಪಾರಿಯು ಅಥವಾ ಉತ್ಪಾದಕನು ಮಾರಾಟ ಮಾಡಿದ ಅಥವಾ ಉತ್ಪಾದಿಸಿದ ಯಾವುದೇ ಔಷಧದ ಸಂಬಂಧದಲ್ಲಿ ಈ ಪ್ರಕರಣದಲ್ಲಿರುವುದು ಯಾವುದೂ ಅವನಿಗೆ ಅನ್ವಯಿಸತಕ್ಕದ್ದಲ್ಲ.

**7. ಹೆಚ್ಚಿನ ದಾಸ್ತಾನುಗಳ ಸ್ವಾಧೀನವನ್ನು ಹೊಂದಿರುವುದನ್ನು ಘೋಷಿಸುವ ಕರ್ತವ್ಯ.–** ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅನುಮತಿಸಲಾದ ಪ್ರಮಾಣಕ್ಕಿಂತ ಹೆಚ್ಚಾಗಿ ಯಾವುದೇ ಔಷಧವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವ ಯಾರೇ ವ್ಯಕ್ತಿಯು ಆ ವಿಷಯವನ್ನು ತತ್‌ಕ್ಷಣವೇ ಚೀಫ್ ಕಮೀಷನರ್‌ನಿಗೆ ಅಥವಾ ಈ ಬಗ್ಗೆ ಅವರಿಂದ ಅಧಿಕಾರ ಹೊಂದಿದ ಇತರ ಅಧಿಕಾರಿಗೆ ವರದಿ ಮಾಡತಕ್ಕದ್ದು ಮತ್ತು ಆ ಹೆಚ್ಚಿನ ಪ್ರಮಾಣವನ್ನು ದಾಸ್ತಾನು, ವಿತರಣೆ ಅಥವಾ ವಿಲೆ ಮಾಡುವ ಬಗ್ಗೆ ಚೀಫ್ ಕಮೀಷನರ್‌ನು ನಿರ್ದೇಶಿಸಬಹುದಾದಂಥ ಕ್ರಮವನ್ನು ಕೈಗೊಳ್ಳತಕ್ಕುದು.

**8. ಮಾರಾಟ ಮಾಡಲು ಇಂಕಾರ ಮಾಡುವುದು.–** ಯಾರೇ ವ್ಯಾಪಾರಿಯು ಅಥವಾ ಉತ್ಪಾದಕನು, ಈ ಅಧಿನಿಯಮವು ವಿಧಿಸಿದ ಪ್ರಮಾಣದ ಪರಿಮಿತಿ ಯಾವುದಾದರೂ ಇದ್ದರೆ, ಅದರೊಳಗೆ, ಯಾವುದೇ ಔಷಧವನ್ನು ಯಾರೇ ವ್ಯಕ್ತಿಗೆ ಮಾರಾಟ ಮಾಡಲು, ಚೀಫ್ ಕಮೀಷನರ್‌ನಿಂದ ಹಾಗೆ ಮಾಡಲು ಮೊದಲೇ ಪ್ರಾಧಿಕೃತನಾಗಿದ್ದ ಹೊರತು, ಸಾಕಷ್ಟು ಕಾರಣವಿಲ್ಲದೆ ಇಂಕಾರ ಮಾಡತಕ್ಕದ್ದಲ್ಲ.

**ವಿವರಣೆ.–** ಔಷಧಕ್ಕೆ ಹೆಚ್ಚಿನ ಬೆಲೆಯನ್ನು ಮುಂದೆ ಪಡೆಯುವ ಸಾಧ್ಯತೆಯನ್ನು ಅಥವಾ ನಿರೀಕ್ಷೆಯನ್ನು ಈ ಪ್ರಕರಣದ ಉದ್ದೇಶಕ್ಕಾಗಿ ಸಾಕಷ್ಟು ಕಾರಣವೆಂದು ಭಾವಿಸತಕ್ಕದ್ದಲ್ಲ.

**9. ಕೆಲವು ಮಾರಾಟಗಳ ಸಂಬಂಧದಲ್ಲಿ ಕೊಡಬೇಕಾದ ನಗದಿ ಮೆಮೊ.–** (1) ಪ್ರತಿಯೊಬ್ಬ ವ್ಯಾಪಾರಿಯು ಅಥವಾ ಉತ್ಪಾದಕನು ಯಾವುದೇ ಔಷಧವನ್ನು ನಗದಿ ಹಣಕ್ಕೆ ಮಾರಾಟ ಮಾಡುವಾಗ, ಖರೀದಿ ಹಣವು ಐದು ರೂಪಾಯಿ ಅಥವಾ ಅದಕ್ಕಿಂತ ಜಾಸ್ತಿ ಇದ್ದರೆ ಎಲ್ಲಾ ಸಂದರ್ಭಗಳಲ್ಲಿ ಮತ್ತು

ಖರೀದಿ ಹಣವು ಐದು ರೂಪಾಯಿಗಳಿಗಿಂತ ಕಡಿಮೆ ಇದ್ದರೆ, ಖರೀದಿದಾರನು ಕೋರಿದ ಸಂದರ್ಭದಲ್ಲಿ ವ್ಯವಹಾರದ ವಿವರಗಳನ್ನು ಒಳಗೊಂಡಿರುವ ನಗದಿ ಮೆಮೊವನ್ನು ಖರೀದಿದಾರನಿಗೆ ಕೊಡತಕ್ಕುದು.

(2) ಚೀಫ್ ಕಮೀಷನರನು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಯಾವುದೇ ಅಂಥ ನಗದಿ ಮೆಮೊದಲ್ಲಿ ಇರಬೇಕಾದ ವಿವರಗಳನ್ನು ನಿಯಮಿಸಬಹುದು.

(3) ಚೀಫ್ ಕಮೀಷನರನು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ನಿರ್ದಿಷ್ಟ ಪ್ರದೇಶಗಳಿಗೆ, ವ್ಯಾಪಾರಿಗಳ ಅಥವಾ ಉತ್ಪಾದಕರ ವರ್ಗಗಳಿಗೆ ಅಥವಾ ಔಷಧಗಳ ವರ್ಗಗಳಿಗೆ ಈ ಪ್ರಕರಣವು ಅನ್ವಯಿಸದಂತೆ ವಿನಾಯಿತಿ ಕೊಡಬಹುದು.

**10. ಬೆಲೆಗಳನ್ನು ಗುರುತು ಮಾಡುವುದು ಮತ್ತು ಬೆಲೆಗಳ ಹಾಗೂ ದಾಸ್ತಾನುಗಳ ಪಟ್ಟಿಯನ್ನು ಪ್ರದರ್ಶಿಸುವುದು.–** (1) ಮಾರಾಟಕ್ಕಾಗಿ ಪ್ರದರ್ಶಿಸಲಾದ ಅಥವಾ ಮಾರಾಟ ಮಾಡಲು ಉದ್ದೇಶಿಸಲಾದ ಯಾವುದೇ ಔಷಧದ ಮೇಲೆ ಮಾರಾಟದ ಬೆಲೆಯನ್ನು ಗುರುತು ಮಾಡುವಂತೆ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸಲಾಗಿರುವ ಔಷಧಗಳ ಬೆಲೆ ಪಟ್ಟಿಯನ್ನು ಮತ್ತು ತನ್ನ ಸ್ವಾಧೀನದಲ್ಲಿರುವಂಥ ಔಷಧಗಳ ಪ್ರಮಾಣವನ್ನು ಪ್ರದರ್ಶಿಸುವಂತೆ ಸಾಮಾನ್ಯವಾಗಿ ವ್ಯಾಪಾರಿಗಳಿಗೆ ಅಥವಾ ಉತ್ಪಾದಕರಿಗೆ, ಅಥವಾ ನಿರ್ದಿಷ್ಟವಾಗಿ ಯಾರೇ ವ್ಯಾಪಾರಿಗೆ ಅಥವಾ ಉತ್ಪಾದಕನಿಗೆ ಚೀಫ್ ಕಮೀಷನರನು ನಿರ್ದೇಶಿಸಬಹುದು, ಮತ್ತು ಹಿಂದೆ ಹೇಳಿದ ಅಂಥ ಯಾವುದೇ ನಿರ್ದೇಶನವನ್ನು ಯಾವ ರೀತಿಯಲ್ಲಿ ಕಾರ್ಯಗತಗೊಳಿಸಬೇಕೆಂಬ ಬಗ್ಗೆ ಮತ್ತಷ್ಟು ನಿರ್ದೇಶನಗಳನ್ನು ಕೊಡಬಹುದು.

(2) ಔಷಧದ ಮೇಲೆ ಅಂಟಿಸಿರುವ ಮತ್ತು ಉತ್ಪಾದಕನು ಗುರುತು ಹಾಕಿದ ಬೆಲೆಯನ್ನು ಸೂಚಿಸುವ ಯಾವುದೇ ಗುರುತುಪಟ್ಟಿಯನ್ನು ಅಥವಾ ಚಿಹ್ನೆಯನ್ನು ಯಾರೇ ವ್ಯಾಪಾರಿಯು ನಾಶ ಮಾಡತಕ್ಕದಲ್ಲ, ತೊಡೆದು ಹಾಕತಕ್ಕದ್ದಲ್ಲ, ಅಥವಾ ಬದಲಾಯಿಸತಕ್ಕದ್ದಲ್ಲ ಅಥವಾ ನಾಶಪಡಿಸುವಂತೆ, ತೊಡೆದು ಹಾಕುವಂತೆ ಅಥವಾ ಬದಲಾಯಿಸದಂತೆ ಮಾಡತಕ್ಕದ್ದಲ್ಲ.

**11. ಸಂಯುಕ್ತವಾಗಿ ಮಾರಾಟಕ್ಕೆ ನೀಡಿರುವಾಗ ಪ್ರತ್ಯೇಕವಾಗಿ ಬೆಲೆಯನ್ನು ತಿಳಿಸುವ ಹೊಣೆಗಾರಿಕೆ.–** ವ್ಯಾಪಾರಿಯು ಅಥವಾ ಉತ್ಪಾದಕರು ಯಾವುದೇ ಔಷಧದ ಮತ್ತು ಇತರ ಕೆಲವು ವಸ್ತುಗಳ ಮಾರಾಟಕ್ಕೆ ಸಂಬಂಧಿಸಿದಂತೆ ಪೂರ್ಣವಾಗಿ ಕೊಡಬೇಕಾದ ಪ್ರತಿಫಲದ ಸಲುವಾಗಿ ಒಂದು ವ್ಯವಹಾರದಲ್ಲಿ ತೊಡಗಲು ನೀಡಿಕೆಯನ್ನು ಮಾಡಿದರೆ, ಹಾಗೆ ನೀಡಿಕೆ ಮಾಡುವ ವ್ಯಾಪಾರಿಯು ಅಥವಾ ಉತ್ಪಾದಕನು, ಯಾವ ವ್ಯಕ್ತಿಗೆ ತಾನು ನೀಡುವುದಾಗಿ ಹೇಳಿದ್ದಾನೋ ಆ ವ್ಯಕ್ತಿಯು ಹಾಗೆ ಮಾಡಲು ಅಗತ್ಯಪಡಿಸಿದಲ್ಲಿ ಆ ಔಷಧಿಗೆ ಗೊತ್ತುಪಡಿಸಿದ ಬೆಲೆಯನ್ನು ಲಿಖಿತದಲ್ಲಿ ತಿಳಿಸತಕ್ಕದ್ದು ಮತ್ತು ಆ ಮಾರಾಟದ ನೀಡಿಕೆಯನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಆ ಔಷಧವನ್ನು ಹಾಗೆ ತಿಳಿಸಿದ ಬೆಲೆಗೆ ಮಾರುವುದಕ್ಕೆ ಮಾಡಿದ ನೀಡಿಕೆ ಎಂದು ಭಾವಿಸತಕ್ಕದ್ದು.

**12. ಔಷಧಗಳನ್ನು ವಿಲೆ ಮಾಡುವುದರ ಬಗ್ಗೆ ನಿಷೇಧ ಅಥವಾ ವಿನಿಯಮನ.–** ಹಾಗೆ ಮಾಡುವುದು ಅವಶ್ಯಕ ಅಥವಾ ಯುಕ್ತವೆಂದು ಚೀಫ್ ಕಮೀಷನರನು ಅಭಿಪ್ರಾಯಪಟ್ಟರೆ, ಅವನು ಲಿಖಿತ ಆದೇಶದ ಮೂಲಕ,–

(ಎ) ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಂದರ್ಭಗಳಲ್ಲಿ ಮತ್ತು ಷರತ್ತುಗಳ ಮೇರೆಗೆ ಹೊರತು, ಯಾವುದೇ ಔಷಧವನ್ನು ವಿಲೆ ಮಾಡುವುದನ್ನು ಪ್ರತಿಷೇಧಿಸಬಹುದು.

(ಬಿ) ಯಾವುದೇ ಔಷಧವನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯಾರೇ ವ್ಯಾಪಾರಿಗೆ ಅಥವಾ ವ್ಯಾಪಾರಿಗಳ ವರ್ಗಕ್ಕೆ ಮತ್ತು ಹಾಗೆ ನಿರ್ದಿಷ್ಟಪಡಿಸಬಹುದಾದಂಥ ಪ್ರಮಾಣದಲ್ಲಿ ಮಾರಾಟ ಮಾಡುವಂತೆ ನಿರ್ದೇಶಿಸಬಹುದು ಮತ್ತು ಈ ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ಆದೇಶದ ಸಂಬಂಧದಲ್ಲಿ ಅವಶ್ಯಕವೆಂದು ಅಥವಾ ಯುಕ್ತವೆಂದು ತನಗೆ ಅನ್ನಿಸುವಂಥ ಮತ್ತಷ್ಟು ಆದೇಶಗಳನ್ನು ಮಾಡಬಹುದು.

**13. ದಂಡಗಳು.–** (1) ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಈ ಅಧಿನಿಯಮದ ಮೂಲಕ ಪ್ರದತ್ತವಾದ ಪ್ರಾಧಿಕಾರದ ಮೇರೆಗೆ ಕೊಟ್ಟ ಯಾವುದೇ ನಿರ್ದೇಶನವನ್ನು ಪಾಲಿಸಲು ತಪ್ಪುವ ಯಾರೇ ವ್ಯಕ್ತಿಯು ಮೂರು ವರ್ಷಗಳವರೆಗಿನ ಕಾರಾವಾಸದಿಂದ, ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಯಾರೇ ವ್ಯಕ್ತಿಯನ್ನು ಅಪರಾಧಿ ಎಂದು ನಿರ್ಣಯಿಸುವ ನ್ಯಾಯಾಲಯವು, ಯಾವ ಔಷಧಗಳ ಸಂಬಂಧದಲ್ಲಿ ಅಪರಾಧ ಮಾಡಲಾಗಿದೆಯೋ ಆ ಔಷಧಗಳ ದಾಸ್ತಾನನ್ನು ಪೂರ್ಣವಾಗಿ ಅಥವಾ ಅದರ ಯಾವುದೇ ಭಾಗವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶ ಮಾಡಬಹುದು.

(3) ಈ ಪ್ರಕರಣದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದನೆಂದು ಆರೋಪಕ್ಕೊಳಗಾಗಿರುವ ವ್ಯಕ್ತಿಯು, ತಾನು ಆರೋಪಕ್ಕೊಳಗಾಗಿರುವ ವಿಷಯದ ಸಂಬಂಧದಲ್ಲಿ ತಾನು ತನ್ನ ನಿಯೋಜಕನ ಅಥವಾ ಇತರ ನಿರ್ದಿಷ್ಟ ವ್ಯಕ್ತಿಯ ಅನುದೇಶಗಳ ಮೇರೆಗೆ ಸೇವಕನಾಗಿ ಅಥವಾ ಇತರ ವ್ಯಕ್ತಿಯ ಏಜಂಟನಾಗಿ ತಾನು ನಿಯೋಜಿತನಾಗಿರುವಾಗ ಆ ಕಾರ್ಯವನ್ನು ಮಾಡಿದೆನೆಂದು ರುಜುವಾತುಪಡಿಸುವುದು ಆ ವ್ಯಕ್ತಿಗೆ ಪ್ರತಿರಕ್ಷೆಯಾಗಿರತಕ್ಕದ್ದು.

**14. ನಿಗಮಗಳು ಮಾಡಿದ ಅಪರಾಧಗಳು.–** ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವನ್ನೆಸಗುವ ವ್ಯಕ್ತಿಯು ಒಂದು ಕಂಪನಿ ಅಥವಾ ಸಂಘ ಅಥವಾ ವ್ಯಕ್ತಿಗಳ ನಿಕಾಯವಾಗಿರುವಲ್ಲಿ, ಅದು ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ, ಪ್ರತಿಯೊಬ್ಬ ನಿರ್ದೇಶಕನು, ವ್ಯವಸ್ಥಾಪಕನು, ಕಾರ್ಯದರ್ಶಿಯು, ಏಜಂಟನು ಅಥವಾ ಅದರ ಆಡಳಿತಕ್ಕೆ ಸಂಬಂಧಪಟ್ಟ ಇತರ ಅಧಿಕಾರಿಯು ಅಥವಾ ವ್ಯಕ್ತಿಯು ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅದನ್ನು ತಡೆಯಲು ಅಗತ್ಯವಾಗಿರುವಂಥ ಎಲ್ಲ ಯುಕ್ತ ಶ್ರದ್ಧೆಯನ್ನು ತಾನು ವಹಿಸಿದ್ದೆನೆಂದು ರುಜುವಾತು ಪಡಿಸಿದ ಹೊರತು, ಅವನನ್ನು ಅಂಥ ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು.

**15. ಪ್ರಕ್ರಿಯೆ.–** (1) ಪೊಲೀಸ್ ಇನ್ಸ್‌ಪೆಕ್ಟರ ಅಥವಾ ಅವನಿಗಿಂತ ಮೇಲ್ದರ್ಜೆಯ ಪೊಲೀಸ್ ಅಧಿಕಾರಿಯಲ್ಲದ ಅಥವಾ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರದಿಂದ ಈ ಬಗ್ಗೆ ಪ್ರಾಧಿಕೃತನಾದ ಪೊಲೀಸ್ ಇನ್ಸ್‌ಪೆಕ್ಟರನ ದರ್ಜೆಗಿಂತ ಕಡಿಮೆ ದರ್ಜೆಯ ಅಧಿಕಾರಿಯಲ್ಲದ ಇತರ ಯಾರೇ ವ್ಯಕ್ತಿಯು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ತನಿಖೆಯನ್ನು ನಡೆಸತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟನ ಪೂರ್ವ ಮಂಜೂರಾತಿಯ ಹೊರತು ಯಾವುದೇ ಪ್ರಾಸಿಕ್ಯೂಷನನ್ನು ಹೂಡತಕ್ಕದ್ದಲ್ಲ.

**16. ಶೋಧನೆ ಮಾಡುವ ಮತ್ತು ಅಭಿಗ್ರಹಣ ಮಾಡುವ ಅಧಿಕಾರಿಗಳು.–** ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ಬಗ್ಗೆ ತನಿಖೆ ನಡೆಸಲು ಸಕ್ಷಮನಾದ ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡಲಾಗಿದೆ ಅಥವಾ ಮಾಡಲಾಗುತ್ತಿದೆ ಎಂದು ತಾನು ನಂಬಲು ಕಾರಣವಿರುವ ಯಾವುದೇ ಸ್ಥಳವನ್ನು ಶೋಧಿಸಬಹುದು ಮತ್ತು ಯಾವ ಔಷಧಗಳ ದಾಸ್ತಾನುಗಳ ಸಂಬಂಧದಲ್ಲಿ ಅಪರಾಧ ಮಡಲಾಗಿದೆಯೋ ಅಥವಾ ಮಾಡಲಾಗುತ್ತಿದೆಯೋ ಆ ಔಷಧಗಳ ದಾಸ್ತಾನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1898ರ (1898ರ) ಉಪಬಂಧಗಳು ಅನ್ವಯವಾಗಬಹುದಾದಷ್ಟರ ಮಟ್ಟಿಗೆ ಅವು ಆ ಸಂಹಿತೆಯ 98ನೇ ಪ್ರಕರಣದ ಮೇರೆಗೆ ಹೊರಡಿಸಿದ ವಾರಂಟಿನ ಪ್ರಾಧಿಕಾರದ ಮೇರೆಗೆ ಶೋಧನೆ ಮಾಡಿದುದಕ್ಕೆ ಅನ್ವಯವಾಗುವಂತೆ ಈ ಅಧಿನಿಯಮದ ಮೇರೆಗಿನ ಯಾವುದೇ ಶೋಧನೆಗೆ ಅಥವಾ ಅಭಿಗ್ರಹಣಕ್ಕೆ ಅನ್ವಯಿಸತಕ್ಕದ್ದು.

**17. ನಿಯಮ ರಚನಾಧಿಕಾರ.**–(1) ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಕೇಂದ್ರ ಸರ್ಕಾರವು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ವ್ಯಾಪಕತೆಗೆ ಬಾಧಕವಾಗದಂತೆ, ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳ ಬಗ್ಗೆ ಅಂಥ ನಿಯಮಗಳು ಉಪಬಂಧಿಸಬಹುದು, ಎಂದರೆ:–

(ಎ) ಸಾಮಾನ್ಯವಾಗಿ ವ್ಯಾಪಾರಿಗಳು ಮತ್ತು ಉತ್ಪಾದಕರು ಅಥವಾ ವಿಶೇಷವಾಗಿ ಯಾರೇ ವ್ಯಾಪಾರಿಯು ಅಥವಾ ಉತ್ಪಾದಕರು ತಾವು ನಡೆಸಿದ ಎಲ್ಲಾ ಮಾರಾಟ ಮತ್ತು ಖರೀದಿ ವ್ಯವಹಾರಗಳ ದಾಖಲೆಗಳನ್ನು ಇಟ್ಟುಕೊಂಡು ಬರುವುದು;

(ಬಿ) ಯಾರೇ ವ್ಯಾಪಾರಿಯು ಅಥವಾ ಉತ್ಪಾದಕನು ನಡೆಸಿದ ವ್ಯಾಪಾರದ ಸಂಬಂಧದಲ್ಲಿ ಅಗತ್ಯವಾಗಬಹುದಾದ ಯಾವುದೇ ಮಾಹಿತಿಯನ್ನು ಒದಗಿಸುವುದು;

(ಸಿ) ಯಾರೇ ವ್ಯಾಪಾರಿಗೆ ಅಥವಾ ಉತ್ಪಾದಕನಿಗೆ ಸೇರಿದ ಅಥವಾ ಅವನ ನಿಯಂತ್ರಣದಲ್ಲಿರುವ ಯಾವುವೇ ಲೆಕ್ಕದ ಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಪರಿಶೀಲಿಸುವುದು.

**18. ಸದ್ಭಾವನೆಯಿಂದ ಕೈಗೊಂಡ ಕ್ರಮದ ಬಗ್ಗೆ ರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ್ದ ಯಾವುದೇ ಕಾರ್ಯದ ಬಗ್ಗೆ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**19. ಇತರ ಕಾನೂನುಗಳ ಉಳಿಸುವಿಕೆ.–** ಈ ಅಧಿನಿಯಮದಲ್ಲಿ ಇರುವ ಯಾವುವೇ ವಿಷಯಗಳನ್ನು ವಿನಿಯಮನಗೊಳಿಸುತ್ತಿದ್ದು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಜೊತೆಗೆ ಈ ಅಧಿನಿಯಮದ ಉಪಬಂಧಗಳು ಇರತಕ್ಕದ್ದಲ್ಲದೆ ಅದನ್ನು ಅಲ್ಪೀಕರಿಸತಕ್ಕದ್ದಲ್ಲ.

20–ನಿರಸಿತ